

ದೀಪಗಳ ಬೆಳಕಿನಲ್ಲಿ ಕಂಗೊಳಿಸುವ ಮೈಸೂರು ನಗರದ ಸೊಬಗು ಕಣ್ತುಂಬಿಕೊಳ್ಳುವುದೇ ಒಂದು ಅಪೂರ್ವ ಅನುಭವ. ಅದರಲ್ಲೂ ಅರಮನೆಯ ಸೊಬಗು ಕೇಳಬೇಕೇ? ಸ್ವರ್ಗವೇ ಧರೆಗಿಳಿದು ಬಂದಂತೆ! ನಕ್ಷತ್ರ ಲೋಕದೊಳಗೆ ಬಂಗಾರದ ಅರಮನೆಯಂತೆ! ಅದೆಂಥ ಚೆಲುವು, ಅದೆಂಥ ಸೊಬಗು. ನೂರು ಕಣ್ಣು ಸಾಲದು ಮೈಸೂರು ನೋಡಲು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲೀಗ ವಿಶ್ವವಿಖ್ಯಾತ ದಸರಾ ಮಹೋತ್ಸವದ ಸಡಗರ. ಸಾಂಸ್ಕೃತಿಕ ಸಂಗಮ ಹಾಗೂ ನವರಾತ್ರಿಯ ಸಂಭ್ರಮದ ನೆಪದಲ್ಲಿ ರಸ್ತೆಗಳು, ವೃತ್ತಗಳು, ರಸ್ತೆ ಬದಿಯ ಮರಗಳು, ಪಾರಂಪರಿಕ ಕಟ್ಟಡಗಳು ದೀಪಾಲಂಕಾರದಿಂದ ಪ್ರಜ್ವಲಿಸುತ್ತಿವೆ. ಅಕ್ಷರಶಃ ಬೆಳಕಿನ ಮಜ್ಜನ. ಈ ಬೆಡಗು ಕಣ್ತುಂಬಿಕೊಳ್ಳುತ್ತಾ ವಿಶಾಲ ರಸ್ತೆಗಳಲ್ಲಿ ಟಾಂಗಾ ಏರಿ ಹೊರಟರೆ ಮಹದಾನಂದ. ಎಲ್ಲೆಲ್ಲಿಂದಲೋ ಬಂದ ಸಾವಿರಾರು ಪ್ರವಾಸಿಗರು ಮೈಸೂರಿನ ಚೆಲುವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ, ಆಸ್ವಾದಿಸುತ್ತಿದ್ದಾರೆ.

## ದುರ್ಗಾ ಪೂಜೆಯ ಮಾದರಿ

ಈ ಬಾರಿಯೂ ಮೈಸೂರು ನಗರಿಯನ್ನು ವಿದ್ಯುತ್ ದೀಪಗಳಿಂದ ವಿನೂತನವಾಗಿ ಅಲಂಕಾರ ಮಾಡಲಾಗಿದೆ. ಪಶ್ಚಿಮ ಬಂಗಾಳದಲ್ಲಿ 'ದುರ್ಗಾ ಪೂಜೆ'ಯ ವೇಳೆ ದೀಪಾಲಂಕಾರ ಮಾಡುವ ಮಾದರಿಯಲ್ಲಿ ಸಿಂಗರಿಸಲಾಗಿದೆ. ವಿವಿಧ ವೃತ್ತಗಳಲ್ಲಿ ಬಣ್ಣದ ವಿದ್ಯುತ್ ದೀಪಗಳಿಂದ ದುರ್ಗಾಮಾತೆಯ ಪ್ರತಿಕೃತಿ ಮಾಡಿ ನಿಲ್ಲಿಸಲಾಗಿದೆ. ಅದಕ್ಕಾಗಿ ಕೋಲ್ಕತ್ತದಿಂದಲೇ ಅಲಂಕಾರಿಕ ಸಾಮಗ್ರಿ ತರಿಸಿರುವುದು ವಿಶೇಷ.

ಇದಲ್ಲದೇ, ಚಾಮುಂಡೇಶ್ವರಿ ದೇವಿ, ಜಯಚಾಮರಾಜೇಂದ್ರ ಒಡೆಯರ್, ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್, ವಿಧಾನಸೌಧ, ಕೆಆರ್‌ಎಸ್ ಜಲಾಶಯ, ಹಂಪಿ ರಥದ ಪ್ರತಿಕೃತಿಗಳನ್ನು ವಿದ್ಯುತ್ ಬಲ್ಬುಗಳನ್ನು ಬಳಸಿ ಮಾಡಲಾಗಿದೆ. ಯೋಗಾಸನದ ಭಂಗಿಗಳನ್ನು ದೀಪಾಲಂಕಾರದ ಮೂಲಕ ತೋರಿಸುತ್ತಿರುವುದು ಈ ಬಾರಿಯ ವಿಶೇಷ. ಜೊತೆಗೆ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಯನ್ನು ವಿದ್ಯುತ್ ದೀಪಗಳ ವಿನ್ಯಾಸದಲ್ಲಿ ಕಣ್ತುಂಬಿಕೊಳ್ಳುವ ಅವಕಾಶ ಲಭಿಸಿದೆ.

ನಗರದಲ್ಲಿ ಸುಮಾರು 75 ಕಿ.ಮೀ.ನಷ್ಟು ವಿದ್ಯುತ್ ಬಲ್ಬುಗಳ ಸೆಟ್ ಅಳವಡಿಸಲಾಗಿದೆ. ಹಾಗೆಯೇ, 91 ವೃತ್ತಗಳು ವಿದ್ಯುತ್ ದೀಪದ ಬೆಳಕಿನಿಂದ ಝಗಮಗಿಸುತ್ತಿವೆ. ಹಿಂದಿನ ದಸರೆಯಲ್ಲಿ ಕೇವಲ 42 ವೃತ್ತಗಳನ್ನು ಸಿಂಗರಿಸಲಾಗಿತ್ತು. ಜೊತೆಗೆ ವಿವಿಧ 10 ಪ್ರತಿಕೃತಿ ರಚಿಸಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಬಹುತೇಕ ಕಡೆ ಎಲ್‌ಇಡಿ ಬಲ್ಬುಗಳನ್ನು ಬಳಸಿರುವುದು ವಿಶೇಷ.